ವಿಷಯ : ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ಸಹಾಯಕ ಇಂಜಿನಿಯರ್‌ಗಳ ನೇಮಕ.

Q : 1376

ಶ್ರೀ ಟಿ. ಬಿ. ಜಯಚಂದ್ರ (ಕಳ್ಯಂಬೆಳ್ಳ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಗಾಗಿಯೇ ಸರ್ಕಾರದವರ 300 ಸಹಾಯಕ ಇಂಜಿನಿಯರ್ ಹುದ್ದೆಗಳಿಗೆ ನೇಮಕಾತಿ ಮಾಡುತ್ತಿರುವರೇ?

ಆ) ಸರ್ಕಾರದವರ ಆವರಣಗಳನ್ನು ನೇಮಿಸುತ್ತಾರೆಯೆ? ಹಾಗಿದ್ದಲ್ಲಿ ಅನುಸರಿಸುವ ಮಾರ್ಗ ಮತ್ತು ನೇಮಕಾತಿ ವಿಧಾನವೇನು?

ಇ) ಸರ್ಕಾರದವರ ಸದರಿ ನೇಮಕಾತಿಯನ್ನು ಕೃಷ್ಣಾ ಮೇಲ್ದಂಡೆ ಯೋಜನೆಗೆ ನೇರವಾಗಿ ಅಥವಾ ಉದ್ಯೋಗ ವಿನಿಮಯ ಕೇಂದ್ರದ ಮುಖಾಂತರ ಮಾಡುವರೇ?

ಈ) ಹಾಗಿದ್ದಲ್ಲಿ ನೇಮಕಾತಿಗಾಗಿ ಅನುಸರಿಸುವ ಮಾರ್ಗ ಮತ್ತು ವಿಧಾನವೇನು?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಹೌದು.

ಆ) ಹೌದು. ಈ ನೇಮಕಾತಿಗಳು ಗುತ್ತಿಗೆ ಆಧಾರದ ಮೇಲೆ ಸಂದರ್ಶನವಿಲ್ಲದೇ ಅರ್ಹತೆ ಹಾಗೂ ಪ್ರಸ್ತುತದಲ್ಲಿನ ರೋಸ್ಟರ್ ಪದ್ಧತಿ ಮತ್ತು ಸರ್ಕಾರದ ಮಿಸಲಾತಿ ನಿಯಮದಂತೆ ಮಾಡಲಾಗುವುದು.

ಇ) ನೇಮಕಾತಿಯು ನೇರವಾಗಿ ಈಗಾಗಲೇ ಹಿಂದಿನ ಪ್ರಕಟಣೆಗೆ ಅನುಗುಣವಾಗಿ ಬಂದಿರುವ ಅರ್ಜಿಗಳನ್ನು ಹಾಗೂ ಸಂಬಂಧಪಟ್ಟ ಉದ್ಯೋಗ ವಿನಿಮಯ ಕಚೇರಿಗಳಿಂದ ಪಡೆದ ಪಟ್ಟಿಯ ಅನುಗುಣ ಅರ್ಹ ಅಭ್ಯರ್ಥಿಗಳಿಂದ ಹೊಸ ಅರ್ಜಿಗಳನ್ನು ಪಡೆದು ಮಾಡಲಾಗುವುದು.

ಈ) ಮೇಲಿನ (ಅ)ನಲ್ಲಿ ವಿವರಿಸಿದಂತೆ.

ವಿಷಯ : ಇಂಡಿ ಉಪ ಕಾಲುವೆ ಮತ್ತು ಮುದ್ಯಾಳ್ ಉಪ ಕಾಲುವೆಗಳ ಲೈನಿಂಗ್‌ಗೆ ಮೆಷಿನ್‌ಗಳ ಖರೀದಿಯಲ್ಲಿ ಅವ್ಯವಹಾರ.

Q : 1378

ಶ್ರೀ ಟಿ. ಬಿ. ಜಯಚಂದ್ರ(ಕಳ್ಯಂಬೆಳ್ಳ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಇಂಡಿ ಉಪ ಕಾಲುವೆ ಮತ್ತು ಮುದ್ಯಾಳ್ ಉಪ